**MVC**: 81/2022

ಪಿ ಡಬ್ಲ್ಯೂ- 1

<u>ಸಾಕ್ಷಿಯನ್ನು ದಿಃ 17.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು 1 ನೇ ಎದುರುದಾರರ ಪರ ಶ್ರೀ ಎಂ ಆರ್ ಆರ್ ವಕೀಲರಿಂದಃ</u>**

ನಾನು ಚಳ್ಳಕೆರೆ ತಾಲೂಕು ಬುಕ್ಕಂಬೂದಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಹಿರಿಯೂರು ನಗರದಲ್ಲಿ ವಾಸ ಮಾಡುತ್ತೇನೆ. ನಾನು ಪ್ರತಿದಿನ ಹಿರಿಯೂರಿನಿಂದಬುಕ್ಕಂಬುದಿ ಗ್ರಾಮಕ್ಕೆ ಸರ್ಕಾರಿ ಬಸ್ ನಲ್ಲಿ ಓಡಾಡುತ್ತಿದ್ದೇನೆ. ಅಪಘಾತವು ದಿನಾಂಕ 29.06.2021 ರಂದು ಆಗಿರುತ್ತದೆ. ಅಪಘಾತವು ಆ ದಿನ ಶಾಲೆಯ ಸಮಯದಲ್ಲಿಯೇ ಬೇಡರ ರೆಡ್ಡಿ ಹಳ್ಳಿ ಕ್ರಾಸ್ ಹತ್ತಿರ ಆಗಿರುತ್ತದೆ. ಆದರೆ ಅಪಘಾತವು ಎರಡು ವಾಹನಗಳ ಮಧ್ಯೆ ಮುಖಾಮುಖಿ ಆಗಿದೆ ಎಂದರೆ ಸರಿಯಲ್ಲ. ನಾನು ಪ್ರಯಾಣ ಮಾಡುತ್ತಿದ್ದ ಬೈಕ್ ಚಾಲಕನ ಹೆಸರು ಗೊತ್ತಿಲ್ಲ. ಅದೇ ರೀತಿ ಸದರಿ ಬೈಕ್ ನ ನಂಬರ್ ಗೊತ್ತಿಲ್ಲ. ನಾನು ಸದರಿ ಬೈಕ್ ಮೇಲೆ ಹಿಂಬದಿ ಸವಾರನಾಗಿ ಕುಳಿತು ಸಂಚಾರಿ ನಿಯಮಗಳನ್ನು ಪಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ನಾನು ಹೆಲ್ಮೆಟ್ ಹಾಕಿರಲಿಲ್ಲ. ಒಂದು ವೇಳೆ ಹೆಲ್ಮೆಟ್ ಧರಿಸಿದ್ದೇ ಆಗಿದಲ್ಲಿ ನನಗೆ ಆಗಿರುವ ಗಾಯಗಳು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನಗೆ ಎಲ್ಲಿ ಎಲ್ಲಿ ಪೆಟ್ಟಾಗಿವೆ ಎಂದು ಹೇಳುತ್ತೇನೆ. ನನ್ನ ಕಣ್ಣುಗಳಿಗೆ , ತಲೆಗೆ, ಕೈಗೆ ಮತ್ತು ದೇಹದ ಇತರೆ ಭಾಗಗಳಿಗೆ ಮೂಳೆ ಮುರಿತದ ಗಾಯಗಳು ಆಗಿವೆ. ಅಪಘಾತದ ನಂತರ ನಾನು ಮೊದಲು ಚಳ್ಳಕೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ನಂತರ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದಿದ್ದೇನೆ. ಕೊನೆಯದಾಗಿ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸದರಿ ಆಸ್ಪತ್ರೆಯಲ್ಲಿ 12 ದಿನ ಒಳರೋಗಿಯಾಗಿದ್ದೆ. ಅಪಘಾತದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಆ ಬಗ್ಗೆ ದೂರು ಕೊಟ್ಟಿದ್ದೇನೆ. ನಾನು ನಂತರ ಪೊಲೀಸರಿಗೆ ಹೆಚ್ಚುವರಿ ಹೇಳಿಕೆ ಕೊಟ್ಟಿದ್ದೇನೆ. ನಮಗೆ ಅಪಘಾತ ಪಡಿಸಿದ ಸ್ಕೂಟಿ ವಾಹನದ ಸಂಖ್ಯೆ ಗೊತ್ತಿಲ್ಲ ಅದೇ ರೀತಿ

ಸದರಿ ಸ್ಕೂಟಿ ವಾಹನದ ಚಾಲಕ ಯಾರು ಇದ್ದರು ಎಂದು ಗೊತ್ತಿಲ್ಲ.

ನಾನು ಈಗಲೂ ಮೊದಲಿನಂತೆ ಸದರಿ ಶಾಲೆಗೆ ದಿನನಿತ್ಯ ಹೋಗುತ್ತಿದ್ದೇನೆ. ಆದರೆ ಅಪಘಾತದ ನಂತರ ನನಗೆ ಯಾವುದೇ ದೈಹಿಕ ತೊಂದರೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ರೂ.14 ಲಕ್ಷ ಖರ್ಚು ಮಾಡಿದ್ದೇನೆ. ಸದರಿ ವೈದ್ಯಕೀಯ ವೆಚ್ಚದ ರೂ.14 ಲಕ್ಷ ಹಣವನ್ನು ಇಲಾಖೆಯಿಂದ ಪಡೆದುಕೊಳ್ಳಬಹುದಿತ್ತು ಎಂದರೆ ಸರಿಯಲ್ಲ. ನಾನು ಚಿತ್ರದುರ್ಗದ ಡಿ ಡಿ ಪಿ ಐ ಕಛೇರಿಯಲ್ಲಿ ಆ ಬಗ್ಗೆ ಸರಿಯಾದ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಡಿ ಡಿ ಪಿ ಐ ಕಛೇರಿಯವರು ನಾನು ದಾಖಲೆಗಳನ್ನು ಸರಿಯಾಗಿ ಕೊಟ್ಟಿಲ್ಲ ಎಂದು ಲಿಖಿತವಾಗಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ರೂ.14 ಲಕ್ಷ ಚಿಕಿತ್ಸೆಗೆ ಖರ್ಚು ಮಾಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತದ ನಂತರ ಸುಮಾರು 40 ದಿನ ರಜೆ ಹಾಕಿದ ಬಗ್ಗೆ ನ್ಯಾಯಾಲಯದಲ್ಲಿ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯಲು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು 1 ನೇ ಎದುರುದಾರನ ತಪ್ಪಿನಿಂದ ಆಗಿಲ್ಲ, ಬದಲಾಗಿ ನಮ್ಮ ಬೈಕ್ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಬೈಕ್ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸೂಚಿಸುವುದು ಸರಿಯಲ್ಲ. ಆದ್ದರಿಂದ 1 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

2 ನೇ ಎದುರುದಾರರ ಪರವಾಗಿ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.